(ಇಂದು ದಿನಾಂಕಃ **01-09-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಪಿ ಕೆ ಎ ವಕೀಲರಿಂದಃ**

ಪ್ರಕರಣದ ವಾದಿ ಹಾಗೂ ಪ್ರತಿವಾದಿ ನನ್ನ ಸಂಬಂಧಿಕರು. ನಾನು ಪ್ರತಿವಾದಿಯ ಹೆಂಡತಿಯ ತಂಗಿಯ ಗಂಡನಾಗಿರುತ್ತೇನೆ. ನನಗೆ ದಾವಾ ಆಸ್ತಿಯ ಬಗ್ಗೆ ಮಾಹಿತಿ ಇರುವುದಿಲ್ಲ. ನಾನೊಬ್ಬನೆ ಸಾಕ್ಷಿ ನುಡಿಯಲು ಬಂದಿದ್ದೇನೆ. ನನಗೆ ವಾದಿ-ಪ್ರತಿವಾದಿಯ ಕುಟುಂಬದ ಬಗ್ಗೆ ಕಳೆದ 25 ವರ್ಷಗಳಿಂದ ಮಾಹಿತಿ ಇರುತ್ತದೆ. ವಾದಿ-ಪ್ರತಿವಾದಿಯ ತಾಯಿ ದೇವಕ್ಕ ಮೃತಪಡುವವರೆಗೆ ಇಬ್ಬರ ಮನೆಯಲ್ಲಿಯೂ ಸಹ ವಾಸವಿದ್ದರು. ವಾದಿ ಒಂದು ಮನೆಯಲ್ಲಿ ಹಾಗೂ ಪ್ರತಿವಾದಿ ಇನ್ನೊಂದು ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಮೃತ ದೇವಕ್ಕ ರವರಿಗೆ ಸಂಬಂಧಿಸಿ ಸದರಿ ಎರಡು ಮನೆಗಳಿವೆ ಎಂದರೆ ಸಾಕ್ಷಿಯು 3 ಮನೆಗಳಿವೆ ಎಂದು ನುಡಿದಿರುತ್ತಾರೆ. ಸದರಿ ಇನ್ನೊಂದು ಮನೆ ಅಣ್ಣಿಗೇರಿಯ ಜಾಡಗೇರಿ ಓಣಿಯಲ್ಲಿದ್ದು, ಆದರೆ ಅದು ಯಾರ ಮನೆಯ ಪಕ್ಕದಲ್ಲಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಮನೆ ಈಗ ಬಿದ್ದಿರುತ್ತದೆ. ಸದರಿ ದೇವಕ್ಕರವರಿಗೆ ಎರಡೇ ಮನೆಗಳಿದ್ದು, ನಾನು ಪ್ರತಿವಾದಿಯ ಸಂಬಂಧಿಕನಾದ ಕಾರಣ ಆತನಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮನೆಗಳ ಸಂಖ್ಯೆಗಳನ್ನು ಹೇಳಲಾಗುವುದಿಲ್ಲ. ದೇವಕ್ಕ ಯಾವಾಗ ಮೃತಪಟ್ಟಿರುತ್ತಾರೆ ಎಂದು ಹೇಳಲಾಗುವುದಿಲ್ಲ.

2. 2012 ರಲ್ಲಿ ಮೃತ್ಯು ಪತ್ರ ಆಗಿರಬಹುದು. ದೇವಕ್ಕರವರು ಸದರಿ ಮೃತ್ಯು ಪತ್ರದಲ್ಲಿ ಮನೆಯನ್ನು ಪ್ರತಿವಾದಿಗೆ ಹೋಗಬೇಕು ಎಂದು ಬರೆದಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ತೋರಿಸಿರುವಂತೆ ವಾದಿಗೆ ಬೇರೆ ಮನೆ ಇರುತ್ತದೆ ಎಂದು ತಿಳಿಸಿದ್ದು, ಸದರಿ ಮನೆ ಯಾವುದು ಎಂದು ನನಗೆ ಹೇಳಲಾಗುವುದಿಲ್ಲ. ಮೃತ್ಯು ಪತ್ರ ಬರೆಯಲು ಸಾಕ್ಷಿಗೆಂದು ನನ್ನನ್ನು ದೇವಕ್ಕರವರೇ ಕರೆದುಕೊಂಡು ಉಗರಗೋಳ ರವರ ಬಳಿ ಹೋಗಿರುತ್ತಾರೆ. ಸದರಿ ದೇವಕ್ಕರವರು ಮೃತ್ಯು ಪತ್ರ ಬರೆಯುವ ವೇಳೆ ಆರೋಗ್ಯಯುತವಾಗಿದ್ದರು ಹಾಗೂ ನಡೆದಾಡುತ್ತಿದ್ದರು. ಅಣ್ಣಿಗೇರಿಯಿಂದ ನಾನು, ದೇವಕ್ಕ, DW-3 ರವರು ಬಂದಿದ್ದೇವು. ಆದರೆ ಪ್ರತಿವಾದಿ ಬಂದಿರಲಿಲ್ಲ. ದೇವಕ್ಕರವರ ಆರೋಗ್ಯ ಸ್ಥಿತಿ ಸರಿಯಿರದಿದ್ದರೂ ಸಹ ಪ್ರತಿವಾದಿ ಆಕೆಯನ್ನು ಹೆದರಿಸಿ ನವಲಗುಂದಕ್ಕೆ ಕರೆದುಕೊಂಡು ಬಂದು ಮೃತ್ಯು ಪತ್ರವನ್ನು ಬರೆಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರದಲ್ಲಿ ದೇವಕ್ಕರವರು ವಾದಿಗೆ ಬೇರೆ ಇನ್ನೊಂದು ಮನೆ ಇದೆ ಎಂದು ಕಾಣಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಡಿ-4

ರಲ್ಲಿ ವಾದಿಯ ವಾಸಕ್ಕೆ ಬೇರೆ ಮನೆ ಇರುತ್ತದೆ ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ದೇವಕ್ಕರವರನ್ನು ಯಾವತ್ತಿಗೂ ಸಹ ವಾದಿಯೇ ಪಾಲನೆ ಪೋಷಣೆ ಮಾಡುತ್ತಿದ್ದ ಎಂದರೆ ಸಾಕ್ಷಿಯು ದೇವಕ್ಕರವರು ವಾದಿ ಹಾಗೂ ಪ್ರತಿವಾದಿ ಇಬ್ಬರ ಬಳಿಯೂ ಸಹ ವಾಸವಿದ್ದರು ಎಂದು ನುಡಿದಿರುತ್ತಾರೆ. ನನಗೆ ಸಂಪೂರ್ಣ ಮಾಹಿತಿ ಇದ್ದರು ಸಹ ಪ್ರತಿವಾದಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**